ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: **1169/2022**

ಪಿಡಬ್ಲ್ಯೂ- **4**
ಸಿಡಬ್ಲ್ಯೂ- **14**

ಸಾಕ್ಷಿಗೆ ದಿನಾಂಕ **13.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಎಂ.ಡಿ ಫೈಜುಲ್ಲಾ
ಗಂಡನ ಹೆಸರು : ಎಂ.ಡಿ.ಗೌಸ್
ವಯಸ್ಸು : 49 ವರ್ಷ
ಉದ್ಯೋಗ : ಪೊಲೀಸ್ ನಿರೀಕ್ಷಕರು, ಕನಕಗಿರಿ ಪೊಲೀಸ್ ಠಾಣೆ, ಕೊಪ್ಪಳ ಜಿಲ್ಲೆ
ವಾಸಸ್ಥಳ : ಕನಕಗಿರಿ

ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ

ನಾನು ಜೂನ್ 2021 ರಿಂದ ಜನವರಿ 2023 ರವರೆಗೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 09.03.2020 ರಂದು ಪ್ರಕರಣದ ಕಡತವನ್ನು ಚಾ.ಸಾ-13 ರವರಿಂದ ಪರಿಶೀಲಿಸಿ ಪಡೆದುಕೊಂಡಿರುತ್ತೇನೆ.

ದಿ: 12.03.2020 ರಂದು ಚಾಸಾ-10 ರವರಿಂದ ಮೃತ ಶರಣ್ ರವರ ಮರಣೋತ್ತರ ವರದಿ ಪಡೆದಿರುತ್ತೇನೆ,

ದಿ: 24.03.2020 ರಂದು ಚಾಸಾ-10 ರವರಿಂದ ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ.

ದಿ: 28.05.2020 ರಂದು ಕೆಎ –37-ಟಿಎ-5796 ಟ್ರಾಕ್ಟರ್ ಮಾಲೀಕರಾದ ಚಾಸಾ-9 ರವರಿಗೆ ಐ ಎಂ ವಿ ಕಲಂ 133 ರ ಅಡಿ ನೋಟೀಸ್ ನೀಡಿರುತ್ತೇನೆ , ಅವರು ಅದೇ ದಿನ ನೋಟೀಸಿಗೆ ಉತ್ತರ ನೀಡಿ ವಾಹನದ ದಾಖಲೆಗಳನ್ನು ಹಾಜರು ಮಾಡಿ ಆರೋಪಿ ವಾಹನ ಚಲಾಯಿಸುತ್ತಿದ್ದ ಬಗ್ಗೆ ತಿಳಿಸಿರುತ್ತಾರೆ. ಅದೇ ದಿನ ಸಂಜೆ 5.00 ಗಂಟೆಗೆ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ . ಅದೇ ದಿನ ಟ್ರಾಕ್ಟರ್ ಮಾಲೀಕರಾದ ಚಾಸಾ -9 ರವರಿಂದ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು

ಅವರ ವಶಕ್ಕೆ ನೀಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 12.08.2020 ರಂದು ಚಾಸಾ -11 ರವರಿಂದ ವಾಹನದ ತಪಾಸಣಾ ವರದಿ ಪಡೆದಿರುತ್ತೇನೆ .

ಅದೇ ದಿನ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಮಾನ್ಯ ಘನ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಮೃತ ಶರಣ್ ರವರ ಶವಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-**9** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-**9(**ಎ**)** ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನ ತಪಾಸಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-**10** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-**10(**ಎ**)** ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-**9** ರವರಿಗೆ ನೀಡಿದ ಐ ಎಂ ವಿ ಕಲಂ **133** ರ ನೋಟೀಸ್ ನೋಡಿ ಗುರುತಿಸಿದ್ದು ಅದನ್ನು ನಿಪಿ-**12** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**12(**ಎ**)** ಎಂದು ಗುರುತಿಸಲಾಯಿತು. ಚಾಸಾ-**9** ರವರ ಹೇಳಿಕೆ ನಿಪಿ-**13** ಎಂದು ಸಾಕ್ಷಿಯ ಸಹಿಯನ್ನು ನಿಪಿ-**13(**ಎ**)** ಎಂದು ಗುರುತಿಸಲಾಯಿತು. ಇಂಡೆಮಿನಿಟಿ ಬಾಂಡ್ ಅನ್ನು ನಿಪಿ-**14** ಎಂದು ಸಾಕ್ಷಿಯ ಸಹಿಯನ್ನು ನಿಪಿ-**14(**ಎ**)** ಎಂದು ಗುರುತಿಸಲಾಯಿತು. ಚಾಸಾ-**1** ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-**15** ಎಂದು ಸಾಕ್ಷಿಯ ಸಹಿಯನ್ನು ನಿಪಿ-**15(**ಎ**)** ಎಂದು ಗುರುತಿಸಲಾಯಿತು. ಚಾಸಾ **-2** ರವರ ಗ್ರಾಯದ ಪ್ರಮಾಣ ಪತ್ರ ನಿಪಿ-**16** ಎಂದು ಸಾಕ್ಷಿಯ ಸಹಿಯನ್ನು ನಿಪಿ **-16(**ಎ**)** ಎಂದು ಗುರುತಿಸಲಾಯಿತು. ಚಾಸಾ-**1** ರವರ ಹೇಳಿಕೆಯನ್ನು ಈಗಾಗಲೇ ನಿಪಿ-**8** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ- **8(**ಎ**)**ಎಂದು ಗುರುತಿಸಲಾಯಿತು. ಚಾಸಾ-**2** ರವರ ಹೇಳಿಕೆಯನ್ನು ಈಗಾಗಲೇ ನಿಪಿ-**6** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**6(**ಎ**)**ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ದಸ್ತಗಿರಿ ಮಾಡಿ ಭದ್ರತೆಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ

ತಕರಾರು ಇಲ್ಲವೆಂದು ಸಲ್ಲಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಹೆಚ್ ಎಸ್ ಆರ್ . ವಕೀಲರಿಂದಃ

ನಾನು ಈ ಮೇಲೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರ್ ಸಿ ಮಾಲೀಕರಿಗೆ ನೋಟೀಸ್ ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ಚಾಸಾ-9 ರವರು ಆರೋಪಿ ವಾಹನ ಚಾಲನೆ ಮಾಡುತ್ತಿದ್ದ ಎಂಬುದರ ಬಗ್ಗೆ ಮಾಹಿತಿ ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ಮೃತರ ಮರಣೋತ್ತರ ವರದಿಯನ್ನು ನಾನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಶರಣ್ ರವರ ತಪ್ಪಿನಿಂದ ಅಪಘಾತ ಆಗಿದ್ದರು ಅದನ್ನು ಮರೆಮಾಚಿ ಅವರಿಗೆ ಪರಿಹಾರ ಬರಲಿ ಎಂದು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸು ನೀಡಿ ನಂತರ ದಸ್ತಗಿರಿ ಮಾಡಿ ಬಿಡುಗಡೆ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯ ಲ್ಲ. ನಾನು ವಾಹನ ತಪಾಸಣೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತ ಆಗದಿದ್ದರೂ ಮೃತರ ಕುಟುಂಬದವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನಾನು ದೋಷಪೂರಿತ ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
ಓ.ಹೇ.ಕೆ.ಸರಿ ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.